MAY 2024 **U/ID 30703/ULC1A**

Time : Three hours Maximum : 75 marks

SECTION A — (10 × 2 = 20 marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. ಮೂಕ ದಾನವ.

2. ಅರ್ಜುನನು ಶಿವನನ್ನು ಹೇಗೆ ಸೋಲಿಸಿದನು?

3. ಭೀಮನು, ಧರ್ಮರಾಯನ ಬಳಿ ಏನು ಹೇಳಿ ತನ್ನ ಸಿಟ್ಟನ್ನು ಪ್ರದರ್ಶಿಸಿದನು?

4. ಅಲ್ಲಮ ಪ್ರಭು.

5. ಚಂದ್ರಮತಿಯು ತನ್ನ ಮನೆಯೊಡೆಯನ ಬಳಿ ಹೋಗಿ ಏನು ಹೇಳಿದಳು?

6. ಲೋಹಿತಾಶ್ವನ ಹೆಣವನ್ನು ಸುಡಲು ಅನುಮತಿ ನೀಡಲಾರೆನೆಂದು ಹರಿಶ್ಚಂದ್ರನು ಹೇಳಿದಾಗ ಚಂದ್ರಮತಿ ಏನೆಂದುಕೊಂಡಳು?

7. ಊರ್ವಶಿಯು ಅರ್ಜುನನ ಅರಮನೆಯನ್ನು ಪ್ರವೇಶಿಸುವಾಗ ಅಲ್ಲಿದ್ದವರು ಏನೆಂದು ಮಾತನಾಡಿಕೊಂಡರು?

8. ಮಾಯೆಯು ಹೇಗೆ ಬೆಳೆಯುತ್ತಿದ್ದಳೆಂದು ಕವಿ ವರ್ಣಿಸುತ್ತಾನೆ?

9. ಗೌತಮ ಮಹರ್ಷಿಯನ್ನು ವ್ರೀಹಿಯು ಏನೆಂದು ಜರಿಯಿತು? ಏಕೆ?

10. ಚಂದ್ರಹಾಸನ ತಂದೆತಾಯಿಗಳು ಯಾರು?

11. ಕಟುಕರು ಚಂದ್ರಹಾಸನನ್ನು ಏಕೆ ಕೊಲ್ಲಲಿಲ್ಲ?

12. ಜನಪದ ಗೀತೆಯಲ್ಲಿ 'ತಾಯಿ'ಯನ್ನು ಹೇಗೆ ನೆನಪಿಸಿಕೊಳ್ಳಲಾಗಿದೆ?

SECTION B — ($5 \times 5 = 25$ marks)

ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. 'ಇನ್ನಾವ ಶೈಲದೊಳಿರ್ಪೆವು ಇರ್ಪೆಡೆವೇಳಾ ನೀಂ ತ್ರಿಪುರಾಂತಕಾ'.

14. 'ಭಾರತ ವರುಷ ಭೂಮಿಯೊಳೊಂದು ವರುಷಾಂತರ ನಪುಂಸಕನಾಗಿ ಚರಿಸು'.

15. 'ದಿನದಿನಕೆ ಕಳೆಯೇರುತಿರ್ದಳು ವಿವಿಧ ವಿಲಾಸ ವೃತ್ತಿಯಲಿ'.

16. 'ಮತ್ತೆ ಬರುವೆಯಾ? ಹುಸಿಯನಾಡುವೆಯೆಂದಿತು'.

17. 'ಸುರ ನದಿಗೆ ತಾ ಸರಿಯೆ ಕಾಡೊಳು ಹರಿವ ಹಳ್ಳದ ನೀರು'.

18. 'ತನಿವಣ್ಗಳಂ ಕಜ್ಜಾಯ ಸಕ್ಕರೆಗಳಂ ಕುಡುವರೆತ್ತಿಕೊಂಡು'.

19. 'ತಾಯಿಲ್ದ ತವರೀಗೆ ಹೋಗದಿರು ನನ ಮನವೆ'.

SECTION C — ($3 \times 10 = 30$ marks)

ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

ಉತ್ತರದ ಮಿತಿ 500 ಪದಗಳು.

20. ಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕರುಣಿಸಿದ ಸನ್ನಿವೇಶವನ್ನು ಪಂಪನು ಹೇಗೆ ವಿವರಿಸಿದ್ದಾನೆ?

21. ಹರಿಶ್ಚಂದ್ರ ಹಾಗೂ ಚಂದ್ರಮತಿಯವರ ನಡುವೆ ನಡೆದ ವಾಗ್ವಾದದ ಸನ್ನಿವೇಶವನ್ನು ವಿವರಿಸಿ.

22. 'ರಾಗಿ–ವ್ರೀಹಿ' ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

23. 'ಗೋವಿನ ಹಾಡು' ಕಥೆಯನ್ನು ನಿರೂಪಿಸಿ.

24. ಚಂದ್ರಹಾಸನ ಬೆರಳುಗಳನ್ನು ಕಟುಕರು ಕತ್ತರಿಸಿದ ಪ್ರಸಂಗವನ್ನು ವರ್ಣಿಸಿ.

———————